| ಕರ್ನಾಟಕ ವಿಧಾನ ಪರಿಷತ್ತು | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 570 |
| 2 | ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : 11.03.2025 |
| 4 | ಉತ್ತರಿಸುವವರು | : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕದ ವೈಮಾನಿಕ, ರೈಲು ಮತ್ತು ಕಡಲ ಸಂಪರ್ಕವನ್ನು ಅಭಿವೃದ್ಧಿಪಡಿಸುವ ವಲಯಗಳಲ್ಲಿ ಮೂಲಸೌಲಭ್ಯದಲ್ಲಿ ಹೆಚ್ಚಿನ ಖಾಸಗಿ ಕ್ಷೇತ್ರದ ಪಾಲ್ಗೊಳ್ಳುವಿಕೆ ಕುರಿತು ಇಲಾಖೆಯ ಮೂಲ ಉದ್ದೇಶದಂತೆ ಎಷ್ಟು ಯೋಜನೆಗಳಲ್ಲಿ ಯಾವ ಯಾವ ಖಾಸಗಿ ಸಂಸ್ಥೆಗಳ ಪಾಲುದಾರಿಕೆಯನ್ನು ಉತ್ತೇಜಿಸಿದೆ (ವಿವರ ನೀಡುವುದು) | ಮೂಲಸೌಲಭ್ಯ ಅಭಿವೃದ್ಧಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯು ಕರ್ನಾಟಕದ ವೈಮಾನಿಕ, ರೈಲು ಮತ್ತು ಕಡಲ ಸಂಪರ್ಕವನ್ನು ಅಭಿವೃದ್ಧಿಪಡಿಸುವ ವಲಯಗಳಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.<br><br>ಪ್ರಸ್ತುತ, ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ವೈಮಾನಿಕ ಸಂಪರ್ಕ ಯೋಜನೆಗಳನ್ನು ಇಪಿಸಿ ಮಾದರಿಯಲ್ಲಿ ಕೈಗೊಳ್ಳಲಾಗುತ್ತಿದೆ. ಭವಿಷ್ಯದಲ್ಲಿ ವೈಮಾನಿಕ ಸಂಪರ್ಕವನ್ನು ಅಭಿವೃದ್ಧಿಪಡಿಸುವಲ್ಲಿ ಹೆಚ್ಚಿನ ಖಾಸಗಿ ಕ್ಷೇತ್ರದ ಪಾಲ್ಗೊಳ್ಳುವಿಕೆ / ಖಾಸಗಿ ಸಂಸ್ಥೆಗಳ ಪಾಲುದಾರಿಕೆಯನ್ನು ಉತ್ತೇಜಿಸುವ ಕುರಿತು ಇಲಾಖೆಯು ಪ್ರಣಾಳಿಕೆಯನ್ನು ಹೊಂದಿರುತ್ತದೆ.<br><br>ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ರೈಲ್ವೆ ಮಂತ್ರಾಲಯ ಸಹಯೋಗದೊಂದಿಗೆ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.<br><br>ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಕಡಲ ಸಂಪರ್ಕವನ್ನು ಅಭಿವೃದ್ಧಿಪಡಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ವಿವಿಧ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದ್ದು ವಿವರಗಳನ್ನು ಅನುಬಂಧ-1 ರಲ್ಲಿ ಸಲ್ಲಿಸಿದೆ. |

<table>
<tr>
<td>ಆ)</td>
<td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ವಲಯದಲ್ಲಿ ಇಲಾಖೆ ಹೂಡಿದ ಬಂಡವಾಳವೆಷ್ಟು;<br>ವೈಮಾನಿಕ, ರೈಲು ಮತ್ತು ಕಡಲ ಸಂಪರ್ಕವನ್ನು ಅಭಿವೃದ್ಧಿಪಡಿಸುವ ವಲಯಗಳಲ್ಲಿ ಹೂಡಿದ ಬಂಡವಾಳವೆಷ್ಟು: (ವಿವರ ನೀಡುವುದು)</td>
<td>ಕಳೆದ 3 ವರ್ಷಗಳಲ್ಲಿ ಸರ್ಕಾರವು ವೈಮಾನಿಕ ಯೋಜನೆಗಳ ಅಭಿವೃದ್ಧಿಗೆ ಬಿಡುಗಡೆ ಮಾಡಿರುವ ಬಂಡವಾಳದ (ಅನುದಾನದ) ವಿವರಗಳು ಈ ಕೆಳಕಂಡಂತಿವೆ:
<table>
<tr><th>ವರ್ಷ</th><th>ಬಿಡುಗಡೆಯಾದ ಮೊತ್ತ ಕೋಟಿಗಳಲ್ಲಿ</th></tr>
<tr><td>2021-22</td><td>90.37</td></tr>
<tr><td>2022-23</td><td>533.00</td></tr>
<tr><td>2023-24</td><td>353.00</td></tr>
</table>
ಕಳೆದ 3 ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಜಲಸಾರಿಗೆ ಮಂಡಳಿಗೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒದಗಿಸಲಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ:
<table>
<tr><th>ವರ್ಷ</th><th>ಬಿಡುಗಡೆಯಾದ ಮೊತ್ತ ಕೋಟಿಗಳಲ್ಲಿ</th></tr>
<tr><td>2021-22</td><td>37.89</td></tr>
<tr><td>2022-23</td><td>34.68</td></tr>
<tr><td>2023-24</td><td>20.57</td></tr>
</table>
ಅನುದಾನ ಮತ್ತು ವೆಚ್ಚದ ವಿವರಗಳನ್ನು ಅನುಬಂಧ-2 ರಲ್ಲಿ ಸಲ್ಲಿಸಿದೆ.<br>
ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ (PPP) ಕೈಗೊಳ್ಳಲಾಗುತ್ತಿರುವ ಯೋಜನೆಗಳಿಗೆ ಇಲಾಖೆಯಿಂದ ಯಾವುದೇ ಬಂಡವಾಳ ಹೂಡಿಕೆ ಇರುವುದಿಲ್ಲ. ಇಲಾಖೆಯು ಖಾಸಗಿ ರಿಯಾಯಿತಿದಾರರಿಗೆ (Concessionaire) ಸಮುದ್ರ ತೀರ (Beach), ಸಮುದ್ರ ತೀರದ ಮುಂಭಾಗ (Waterfront), ರೈಲ್ವೆ/ರಸ್ತೆ ಸಂಪರ್ಕಕ್ಕಾಗಿ ಹಾಗೂ ಇತರೇ ಪೂರಕ ಅಭಿವೃದ್ಧಿಗಳಿಗಾಗಿ ಬೇಕಾಗುವ ಭೂಮಿ ಒದಗಿಸುವಿಕೆಯಲ್ಲಿ ಸಹಕಾರ, ಪರಿಸರ ಅನುಮತಿ (Environmental Clearance), ಕರಾವಳಿ ವಲಯ ನಿಯಂತ್ರಣ ವಲಯದಿಂದ ಅನುಮತಿ (CRZ) ಇತ್ಯಾದಿ ಶಾಸನಬದ್ಧ ಅನುಮತಿಗಳಿಗಾಗಿ ಅಗತ್ಯ ಸಹಕಾರ ನೀಡುತ್ತದೆ. ಮೇಲಿನವುಗಳಿಗಾಗಿ ತಗಲುವ ವೆಚ್ಚವನ್ನು ರಿಯಾಯಿತಿದಾರರೇ ಭರಿಸುತ್ತಾರೆ.</td>
</tr>
</table>

| | | |
|---|---|---|
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವೈಮಾನಿಕ, ರೈಲು ಮತ್ತು ಕಡಲ ಸಂಪರ್ಕವನ್ನು ಅಭಿವೃದ್ಧಿಪಡಿಸಲು ಖಾಸಗಿ ಕ್ಷೇತ್ರದ ಪಾಲ್ಗೊಳ್ಳುವಿಕೆಯೊಂದಿಗೆ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ: (ವಿವರ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ, ಇಲಾಖೆಯು ವೈಮಾನಿಕ ಸಂಪರ್ಕ ಯೋಜನೆಗಳನ್ನು ಇಪಿಸಿ ಮಾದರಿಯಲ್ಲಿ ಕೈಗೊಳ್ಳಲಾಗುತ್ತಿದೆ. ದಕ್ಷಿಣ ಕನ್ನಡದಲ್ಲಿ ಇರುವ ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ರನ್ವೇ ಎಂಡ್ ಸೇಫ್ಟಿ ಏರಿಯಾ (Runway end safety area) ವಿಸ್ತರಣೆಗಾಗಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ ವ್ಯವಹಾರವನ್ನು ನಡೆಸಲಾಗುತ್ತಿದೆ. ಆಯವ್ಯಯ 2023-24ರ ಘೋಷಣೆಯಂತೆ, ದಕ್ಷಿಣ ಕನ್ನಡ ಜಿಲ್ಲೆಗು ಧರ್ಮಸ್ಥಳದಲ್ಲಿ ಕಿರು ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಇಲಾಖೆಯು ಕ್ರಮ ಕೈಗೊಳ್ಳುತ್ತಿದೆ.<br><br>ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ರೈಲ್ವೆ ಮಂತ್ರಾಲಯ ಸಹಯೋಗದೊಂದಿಗೆ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಡಲ ಸಂಪರ್ಕವನ್ನು ಅಭಿವೃದ್ಧಿಪಡಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ವಿವಿಧ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದ್ದು ವಿವರಗಳನ್ನು ಅನುಬಂಧ-3 ರಲ್ಲಿ ಸಲ್ಲಿಸಿದೆ. |
| ಈ) | ಈ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರದ ನಡುವೆ ಸಮನ್ವಯ ಸಾಧಿಸಲು ಇಲಾಖೆ ಈವರೆಗೆ ಯಾವ ಕ್ರಮ ವಹಿಸಿದೆ: ಎಷ್ಟು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ; ಮತ್ತು ಎಷ್ಟು ಪ್ರಸ್ತಾವನೆಗಳು ಕಾರ್ಯರೂಪಕ್ಕೆ ಬಂದಿವೆ: | ಮೇಲಿನಂತೆ, ಬಂದರು ಯೋಜನೆಗಳ ಅಭಿವೃದ್ಧಿಗಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಸದರಿ ಯೋಜನೆಗಳ ಪ್ರಸ್ತುತ ಹಂತದ ಬಗ್ಗೆ ವಿವರಗಳನ್ನು ಅನುಬಂಧಗಳಲ್ಲಿ ಲಗತ್ತಿಸಿದೆ. |

| | | |
|---|---|---|
| ಉ) | ಕರ್ನಾಟಕ ರೈಲ್ವೆ ಇನ್ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಕಾರ್ಪೊರೇಷನ್ (ಕೆ-ರೈಡ್) ಮೂಲಕ ರೈಲ್ವೆ ಸಚಿವಾಲಯದ ಪಾಲುದಾರಿಕೆಯೊಂದಿಗೆ ಕರಾವಳಿ ಭಾಗದ ಜನವಸತಿ ಪ್ರದೇಶದಲ್ಲಿ ಅತೀ ಅಗತ್ಯವಿರುವ ರೈಲ್ವೆ ಲೆವೆಲ್ ಕ್ರಾಸಿಂಗ್, ಮೇಲ್ಸೇತುವೆ, ಕೆಳಸೇತುವೆ, ಸರಕು ಶೆಡ್, ರೈಲ್ವೆ ನಿಲ್ದಾಣಗಳ ಅಭಿವೃದ್ಧಿಗೆ ಕ್ರಮವಹಿಸದಿರಲು ಕಾರಣಗಳೇನು: ಈ ಕುರಿತಂತೆ ಕ್ರಮ ವಹಿಸಲಾಗುವುದು ಯಾವಾಗ? | ಕರ್ನಾಟಕ ರೈಲ್ವೆ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಂಪನಿ (ಕೆ-ರೈಡ್) ನಿಯಮಿತವು ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯದ ಜಂಟಿ ಸಹಭಾಗಿತ್ವದ ಕಂಪನಿಯಾಗಿದ್ದು, ಈ ಕಂಪನಿಯಿಂದ ಬೆಂಗಳೂರು ಉಪನಗರ ರೈಲ್ವೆ ಯೋಜನೆ ಮತ್ತು ರೈಲ್ವೆ ದ್ವಿಪಥೀಕರಣ ಯೋಜನೆಗಳನ್ನು ಮಾತ್ರ ಕೈಗೊಳ್ಳಲಾಗುತ್ತಿದ್ದು, ಕರಾವಳಿ ಭಾಗದ ಜನವಸತಿ ಪ್ರದೇಶದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್, ಮೇಲ್ಸೇತುವೆ, ಕೆಳಸೇತುವೆ, ಸರಕು ಶೆಡ್, ರೈಲ್ವೆ ನಿಲ್ದಾಣಗಳ ಅಭಿವೃದ್ಧಿಗಾಗಿ ಯಾವುದೇ ಕ್ರಮ ಕೈಗೊಳ್ಳುತ್ತಿರುವುದಿಲ್ಲ.<br><br>ಕರಾವಳಿ ಭಾಗದ ಜನವಸತಿ ಪ್ರದೇಶದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್, ಮೇಲ್ಸೇತುವೆ, ಕೆಳಸೇತುವೆ, ಸರಕು ಶೆಡ್, ರೈಲ್ವೆ ನಿಲ್ದಾಣಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ರೈಲ್ವೆ ಸಚಿವಾಲಯದ ಯೋಜನೆಗಳಲ್ಲಿ ಕ್ರಮವನ್ನು ಕೈಗೊಳ್ಳುತ್ತಿದೆ. |

ಅಡಕ: ಅನುಬಂಧ – 1, 2 & 3

ಸಂಖ್ಯೆ: ಐಡಿಡಿ 16 ಐಟಿಐಎಸ್ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

# ಅನುಬಂಧ-1

## 1. ಕೇಣಿ ಬಂದರು ಅಭಿವೃದ್ಧಿ:

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಕೇಣಿಯಲ್ಲಿ ಅಂದಾಜು ರೂ.4118.00 ಕೋಟಿ ಮೊತ್ತದಲ್ಲಿ 30 MTPA ಸಾಮರ್ಥ್ಯದ ಬಂದರನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು M/s JSW Infrastructure Limited ರವರೊಂದಿಗೆ ರಿಯಾಯಿತಿ ಒಪ್ಪಂದ (Concession Agreement) ವನ್ನು ನಿರ್ವಹಿಸಲಾಗಿದೆ. ರಿಯಾಯಿತಿ ಒಪ್ಪಂದದನ್ವಯ, ಯೋಜನೆಯ ವಿಸ್ತೃತ ಯೋಜನಾ ವರದಿ (DPR) ಯ ಪರಿಶೀಲನೆ, ನಕ್ಷೆ ಹಾಗೂ ದಾಖಲೆಗಳ ಸಮೀಕ್ಷೆ, ನಿರ್ಮಾಣ ಸಮಯದಲ್ಲಿ ಪರಿವೀಕ್ಷಣೆ, ಮೇಲ್ವಿಚಾರಣೆ ಇತರೆ ಬಂದರು ಅಭಿವೃದ್ಧಿ ಸಂಬಂಧಿತ ಕಾಮಗಾರಿಗಳನ್ನು ನಿರ್ವಹಿಸಲು ಸ್ವತಂತ್ರ ಇಂಜಿನಿಯರ್ (Independent Engineer) ನ್ನು ಟೆಂಡರ್ ಮೂಲಕ ಹಾಗೂ ರಿಯಾಯಿತಿದಾರರನ್ನು ನೇಮಿಸಲಾಗಿದೆ.

## 2. ಹೊನ್ನಾವರ ಬಂದರು ಅಭಿವೃದ್ಧಿ :

ಹೊನ್ನಾವರ ಬಂದರನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ 4.9 MTPA ಸಾಮರ್ಥ್ಯದಲ್ಲಿ ರೂ. 613.00 ಕೋಟಿ ಮೊತ್ತದ ಅಂದಾಜಿನೊಂದಿಗೆ ಅಭಿವೃದ್ಧಿಪಡಿಸಲು M/s. Honnavar Port Pvt. Ltd., (HPPL) ಸಂಸ್ಥೆಗೆ ಕಾಸರಕೋಡ ಬದಿಯಲ್ಲಿ 40,000 ಚ.ಮೀ ಬಂದರು ಭೂಮಿಯನ್ನು 30 ವರ್ಷದ ಅವಧಿಗೆ ಲೀಸ್ ಆಧಾರದ ಮೇಲೆ ನೀಡಲಾಗಿದೆ.

ಈ ಬಂದರು ನಿರ್ಮಾಣ ಯೋಜನೆಗೆ ಹಾಗೂ ಯೋಜನಾ ಸ್ಥಳಕ್ಕೆ NH-66 ರಿಂದ ಚತುಷ್ಪಥ ಸಂಪರ್ಕ ರಸ್ತೆ ಕಲ್ಪಿಸಲು ಭಾರತಮಾಲಾ ಪರಿಯೋಜನೆಯಡಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ಇವರು ಕೈಗೊಳ್ಳುವ ಕಾಮಗಾರಿಗೆ ಬಂದರು ಯೋಜನೆಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಯೋಜನಾ ನಿರ್ದೇಶಕರು, ಯೋಜನಾ ನಿರ್ವಹಣಾ ಘಟಕ, NHAI, ಹೊನ್ನಾವರ ಇವರಿಗೆ ಭೂಮಿಯನ್ನು ಹಸ್ತಾಂತರಿಸಿರುತ್ತಾರೆ.

ಪ್ರಸ್ತುತ, M/s HPPL ಸಂಸ್ಥೆಯವರು ಹೊನ್ನಾವರ ಬಂದರು ಅಭಿವೃದ್ಧಿ ಯೋಜನೆ ಕೈಗೊಳ್ಳಲು State Environmental Impact Assessment Authority (SEIAA)-Karnataka ಸಮಿತಿಯಿಂದ CRZ ಮತ್ತು Environmental Clearance (EC) ನೀಡಲಾಗಿದೆ.

## 3. ಪಾವಿನಕುರ್ವೆ ಬಂದರು ಅಭಿವೃದ್ಧಿ :

ಪಾವಿನಕುರ್ವೆಯಲ್ಲಿ 14 MTPA ಸಾಮರ್ಥ್ಯದಲ್ಲಿ, ಅಂದಾಜು ₹3047.00 ಕೋಟಿ ಮೊತ್ತದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ಗ್ರೀನ್‌ಫೀಲ್ಡ್ ಬಂದರು ಅಭಿವೃದ್ಧಿಪಡಿಸಲು ಈಗಾಗಲೇ ಎರಡು ಬಾರಿ Request For Proposal (RFP) ಯನ್ನು ಆಹ್ವಾನಿಸಲಾಗಿ ಯಾವುದೇ ಬಿಡ್‌ಗಳು ಸ್ವೀಕೃತವಾಗಿಲ್ಲ. ಆದ್ದರಿಂದ ಮೂರನೇ ಬಾರಿ Request For Proposal (RFP) ಆಹ್ವಾನಿಸಲಾಗಿದ್ದು, ಯಾವುದೇ ಬಿಡ್ಡುದಾರರು ಭಾಗವಹಿಸಿರುವುದಿಲ್ಲ. ಈ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುತ್ತಿದೆ.

4. **ಮಂಕಿ ಬಂದರು ಅಭಿವೃದ್ಧಿ** : ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರು ಮಂಡಿಸಿರುವ 2023-24 ನೇ ಸಾಲಿನ ಆಯವ್ಯಯ ಕಂಡಿಕೆ 248 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಮಂಕಿಯಲ್ಲಿ ಬಹೂಪಯೋಗಿ ಬಂದರಿನ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಲಾಗುವುದು ಎಂದು ಘೋಷಿಸಿರುತ್ತಾರೆ. ಯೋಜನೆಯ ಕಾರ್ಯಸಾಧ್ಯತಾ ವರದಿ (Feasibility Report) ಯನ್ನು Department of Ocean Engineering, IIT Madras ರವರಿಂದ ತಯಾರಿಸಲಾಗಿದೆ. ಇದಲ್ಲದೇ, Konkan Railway Corporation Limited (KRCL) ರವರನ್ನು ಸದರಿ ಬಂದರಿಗೆ ರೈಲು ಸಂಪರ್ಕ ಕಲ್ಪಿಸುವ ಕುರಿತು ವಿಶ್ಲೇಷಣೆಯನ್ನು ಕೈಗೊಳ್ಳಲು ಕೋರಲಾಗಿದೆ.

5. **4 ಬರ್ತ್‌ಗಳ 'ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT)** :

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ಕೆಳಕಂಡ ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಮುಂದುವರೆಸಲು ದಿನಾಂಕ : 13.02.2025 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ (SLSWA) ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿದೆ.

i. ಕರ್ನಾಟಕ ಜಲಸಾರಿಗೆ ಮಂಡಳಿಯು ಕಾರವಾರ ಬಂದರು, ಹಳೇ ಮಂಗಳೂರು ಬಂದರು (ಬೆಂಗ್ರೆ ಬದಿ), ಹಳೇ ಮಂಗಳೂರು ಬಂದರು (ನಗರ ಬದಿ) ಮತ್ತು ಮಲ್ಪೆ ಬಂದರುಗಳಲ್ಲಿ 'ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT)' ಆಧರಿಸಿದ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ, ನಾಲ್ಕು ಬರ್ತ್‌ಗಳನ್ನು ಅಭಿವೃದ್ಧಿಪಡಿಸಲು ಗುರುತಿಸಲಾಗಿದೆ. ಪ್ರಸ್ತಾವನೆಗೆ ದಿನಾಂಕ : 13.02.2025 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ (SLSWA) ಸಭೆಯಿಂದ ತೀರುವಳಿ ಪಡೆಯಲಾಗಿರುತ್ತದೆ. ಮುಂದುವರೆದು, ಪ್ರಸ್ತಾಪಿತ ಕರಡು ವಿನಂತಿಗಳ (RFPs) ಮತ್ತು ಕರಡು ರಿಯಾಯಿತಿ ಒಪ್ಪಂದಗಳ (DCAs) ಸಿದ್ಧತೆಯು ಪೂರ್ಣಗೊಂಡಿದ್ದು ಟೆಂಡರ್ ಕರೆಯಲು ಕ್ರಮ ಜರುಗಿಸಲಾಗುತ್ತಿದೆ.

ii. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಮತ್ತು ಪ್ರವಾಸೋದ್ಯಮ ಬಂದರನ್ನು (ICTP) ಅಭಿವೃದ್ಧಿಪಡಿಸಲು ಐ.ಐ.ಟಿ ಮದ್ರಾಸ್ ಸಹಯೋಗದೊಂದಿಗೆ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.

iii. ದ್ವೀಪಗಳ ಸಮಗ್ರ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ಅನ್ನು ತಯಾರಿಸಲಾಗುತ್ತಿದೆ.

iv. ಮಂಗಳೂರಿನ ಗುರುಪುರ ಹಾಗೂ ನೇತ್ರಾವತಿ ನದಿಗಳಲ್ಲಿ ಜಲಮೆಟ್ರೋ ಸೇವೆಗಳನ್ನು ಪರಿಚಯಿಸಲು ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.

ನಿರ್ದೇಶಕರು
ಬಂದರು ಮತ್ತು ಸದಸ್ಯರು,
(ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ)
ಕರ್ನಾಟಕ ಜಲಸಾರಿಗೆ ಮಂಡಳಿ,
ಕಾರವಾರ

# ಅನುಬಂಧ-2

ಕಳೆದ 3 ವರ್ಷಗಳಲ್ಲಿ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕರ್ನಾಟಕ ಜಲಸಾರಿಗೆ ಮಂಡಳಿಗೆ ಒದಗಿಸಲಾದ ಅನುದಾನ ಹಾಗೂ ವೆಚ್ಚದ ವಿವರ

(ರೂ. ಕೋಟಿಗಳಲ್ಲಿ)

| ಯೋಜನೆ | 2021-22 | | | | 2022-23 | | | | 2023-24 | | | |
|---|---|---|---|---|---|---|---|---|---|---|---|---|
| | ಮೂಲ ಅನುದಾನ | ಪರಿಷ್ಕೃತ ಅನುದಾನ | ಬಿಡುಗಡೆ | ವೆಚ್ಚ | ಮೂಲ ಅನುದಾನ | ಪರಿಷ್ಕೃತ ಅನುದಾನ | ಬಿಡುಗಡೆ | ವೆಚ್ಚ | ಮೂಲ ಅನುದಾನ | ಪರಿಷ್ಕೃತ ಅನುದಾನ | ಬಿಡುಗಡೆ | ವೆಚ್ಚ |
| 5051- ಸಾಗರಮಾಲಾ ಯೋಜನೆ (ಕೇಂದ್ರದ ಪಾಲು) | - | - | - | - | 25.00 | 0.00 | 0.00 | 0.00 | 10.00 | 10.00 | 0.00 | 0.00 |
| 5051- ಸಾಗರಮಾಲಾ ಯೋಜನೆ (ರಾಜ್ಯದ ಪಾಲು) | 50.00 | 44.00 | 21.74 | 21.74 | 25.00 | 20.38 | 20.38 | 20.38 | 22.50 | 22.50 | 6.50 | 5.57 |
| 5051- ಬಂದರು ಮತ್ತು ಒಜಸಾ ಅಭಿವೃದ್ಧಿ | 11.15 | 16.15 | 16.15 | 16.15 | 14.30 | 14.30 | 14.30 | 14.30 | 15.00 | 15.00 | 15.00 | 15.00 |
| ಒಟ್ಟು | **61.15** | **60.15** | **37.89** | **37.89** | **64.30** | **34.68** | **34.68** | **34.68** | **47.50** | **47.50** | **21.50** | **20.57** |

ನಿರ್ದೇಶಕರು,
ಬಂದರು ಮತ್ತು ಸದಸ್ಯರು,
(ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ)
ಕರ್ನಾಟಕ ಜಲಸಾರಿಗೆ ಮಂಡಳಿ,
ಕಾರವಾರ

## ಅನುಬಂಧ-3

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ಕೆಳಕಂಡ ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಮುಂದುವರೆಸಲು ದಿನಾಂಕ : 13.02.2025 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ (SLSWA) ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿದೆ.

1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಮತ್ತು ಪ್ರವಾಸೋದ್ಯಮ ಬಂದರನ್ನು (ICTP) ಅಭಿವೃದ್ಧಿಪಡಿಸಲು ಐ.ಐ.ಟಿ ಮದ್ರಾಸ್ ಸಹಯೋಗದೊಂದಿಗೆ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.

2. ದ್ವೀಪಗಳ ಸಮಗ್ರ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ಅನ್ನು ತಯಾರಿಸಲಾಗುತ್ತಿದೆ.

3. ಮಂಗಳೂರಿನ ಗುರುಪುರ ಹಾಗೂ ನೇತ್ರಾವತಿ ನದಿಗಳಲ್ಲಿ ಜಲಮೆಟ್ರೋ ಸೇವೆಗಳನ್ನು ಪರಿಚಯಿಸಲು ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.

4. 4 ಬರ್ತ್‌ಗಳ 'ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT): ಕರ್ನಾಟಕ ಜಲಸಾರಿಗೆ ಮಂಡಳಿಯು ಕಾರವಾರ ಬಂದರು, ಹಳೇ ಮಂಗಳೂರು ಬಂದರು (ಬೆಂಗ್ರೆ ಬದಿ), ಹಳೇ ಮಂಗಳೂರು ಬಂದರು (ನಗರ ಬದಿ) ಮತ್ತು ಮಲ್ಪೆ ಬಂದರುಗಳಲ್ಲಿ 'ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT)' ಆಧಾರಿತ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ನಾಲ್ಕು ಬರ್ತ್‌ಗಳನ್ನು ಅಭಿವೃದ್ಧಿಪಡಿಸಲು ಗುರುತಿಸಲಾಗಿದೆ. ಮುಂದುವರೆದು, ಪ್ರಸ್ತಾಪಿತ ಕರಡು ವಿನಂತಿಗಳ (RFPs) ಮತ್ತು ಕರಡು ರಿಯಾಯಿತಿ ಒಪ್ಪಂದಗಳ (DCAs) ಸಿದ್ಧತೆಯು ಪೂರ್ಣಗೊಂಡಿದ್ದು ಟೆಂಡರ್ ಕರೆಯುವ ಕ್ರಮ ಜರುಗಿಸಲಾಗುತ್ತಿದೆ.

ನಿರ್ದೇಶಕರು,
ಬಂದರು ಮತ್ತು ಸದಸ್ಯರು,
(ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ)
ಕರ್ನಾಟಕ ಜಲಸಾರಿಗೆ ಮಂಡಳಿ,
ಕಾರವಾರ